# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 319 ವೆಚ್ಚ 6/2020(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:8.9.2020

## ಸುತ್ತೋಲೆ

**ವಿಷಯ:** ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ನಿಧಿ-1 ಮತ್ತು ನಿಧಿ-3 ರಡಿ ಲಭ್ಯವಿರುವ ಅನುದಾನಗಳನ್ನು ನವೀಕರಿಸಿ ಮುಂದುವರೆಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂಖ್ಯೆ : ಆಇ 461 ವೆಚ್ಚ 6/2019, ದಿ: 28.08.2019

2. ಸರ್ಕಾರದ ಆದೇಶ ಸಂಖ್ಯೆ ಆಇ 405 ವೆಚ್ಚ 6/2019, ದಿ: 10.01.2020

********

ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿ ನಿಧಿ ಖಾತೆಗಳಲ್ಲಿ ವರ್ಷಾಂತ್ಯದಲ್ಲಿ ಉಳಿಯುವ, ವೆಚ್ಚ ಮಾಡದೆ ಇರುವ ಶಿಲ್ಕನ್ನು ( ನಿಧಿ 1 & 3 ರ) ಮುಂದಿನ ಆರ್ಥಿಕ ಸಾಲಿಗೆ ಮುಂದುವರೆಸಬೇಕಾಗಿರುತ್ತದೆ. ಈ ಕುರಿತು ಖಜಾನೆ-2 ರಲ್ಲಿ ಪ್ರತಿ ವರ್ಷ ಮಾರ್ಚಿ 31 ನೇ ತಾರೀಖಿನಂದು ಉಳಿಯುವ ಶಿಲ್ಕನ್ನು ಮುಂದಿನ ಆರ್ಥಿಕ ಸಾಲಿಗೆ ಮುಂದುವರೆಸುವ ಕುರಿತು ಕ್ರಮತೆಗೆದುಕೊಳ್ಳಲಾಗಿದೆ. ಆದರಂತೆ, ಈ ಪ್ರಕ್ರಿಯೆಯನ್ನು (Process) ರೂಪಿಸಲಾಗಿದೆ.

ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತ್ ನಿಧಿ 1 & 3 ರಲ್ಲಿ 2014-15 ರಿಂದ 2018-19 ರ ಶಿಲ್ಕುಗಳನ್ನು ನವೀಕರಿಸಿ ಖಜಾನೆ-2 ರಲ್ಲಿ ಅಳವಡಿಸಿ ಲಭ್ಯಗೊಳಿಸುವ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆಗಳನ್ನು ಈಗಾಗಲೇ ನೀಡಲಾಗಿದೆ. 2019-20 ನೇ ಸಾಲಿನ ಶಿಲ್ಕನ್ನು 2020-21 ನೇ ಸಾಲಿಗೆ ಮುಂದುವರೆಸುವ ಕುರಿತು, ಹಾಗು ಮುಂದಿನ ಸಾಲುಗಳಲ್ಲಿ, ಖಜಾನೆ-2 ರಲ್ಲಿ ಸಮ್ಮೃಕರಿಸಬೇಕಾದ ಪ್ರಕ್ರಿಯೆಯನ್ನು (Process) ರೂಪಿಸುವವರೆಗೆ ತಾತ್ಕಾಲಿಕವಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಉಲ್ಲೇಖಿತ (1)ರ ಸರ್ಕಾರದ ಸುತ್ತೋಲೆಯಲ್ಲಿ ರಾಜ್ಯದಲ್ಲಿ ಎಲ್ಲಾ ಖಜಾನೆಗಳು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಗಳು ಲೆಕ್ಕ ಸಲ್ಲಿಸುವಿಕೆ ಹಾಗೂ ಸಮನ್ವಯೀಕರಣ ಮಾಡುವಂತೆ ಈ ಕೆಳಕಂಡಂತೆ ಕಾಲಮಿತಿಯೊಂದನ್ನು ನಿಗದಿಗೊಳಿಸಲಾಗಿದೆ.

| Activity | Officer responsible for the activity | Timeline |
|---|---|---|
| 62(B) Expenditure Statement Generation and Reconciliation | **DDO** | 5th of the following month |
| 62(c) Broad Sheet and 62(D) Compilation Sheet Generation and Reconciliation. | **CO** | 10th of the following month |
| Rendition of Monthly Accounts to ZPs | DTO | 15TH of following month |
| Rendition of Monthly Accounts TPs | DTO & STO | 15TH of following month |
| Processing of vouchers and challans | CAOs of ZPs & Eos of TPs | 27TH of following month |
| Preparation of Monthly MPAS Accounts | CAO of ZPs & Eos of TPs | 30th of the following month |

ಮೇಲ್ಕಂಡ ಸೂಚನೆಗಳಂತೆ, ಜಿಲ್ಲಾ ಪಂಚಾಯತ್, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ಪ್ರತಿ ಮಾಹೆ 27 ನೇ ದಿನಾಂಕದೊಳಗೆ ಹಿಂದಿನ ಮಾಹೆಯ ಲೆಕ್ಕಗಳಿಗೆ ಸಂಬಂಧಿಸಿದಂತೆ, ವೋಚರುಗಳು ಹಾಗೂ ಚಲನ್ ಗಳನ್ನು ಸಂಸ್ಕರಿಸಬೇಕಾಗಿರುತ್ತದೆ. (Processing of Vouchers and Challans) ಈ ಸಂಸ್ಕರಣೆಯು ಮುಗಿದ ನಂತರ ಲೆಕ್ಕ ಸಮನ್ವಯೀಕರಣ ತಃಖ್ತೆಯನ್ನು ಖಜಾನೆ-2 ರಲ್ಲಿ ಸೃಜಿಸಿ ಸಂಬಂಧಿಸಿದ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಹಣಾಧಿಕಾರಿಗಳು ಸಿಸ್ಟಂನಲ್ಲಿ ದೃಢೀಕರಿಸಬೇಕಾಗಿರುತ್ತದೆ.

ಖಜಾನೆ-2 ಪಿ.ಎಂ.ಘಟಕವು, ಹಿಂದಿನ ಸಾಲಿನ ಎಲ್ಲಾ 12 ತಿಂಗಳ ಲೆಕ್ಕಗಳಿಗೆ ಸಂಬಂಧಿಸಿದಂತೆ, ಆಯಾ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಗಳು ಮೇಲ್ಕಂಡ ಚಟುವಟಿಕೆಗಳನ್ನು ಪೂರೈಸಿರುವ ಕುರಿತು ಪರಿಶೀಲಿಸಿ ಲೆಕ್ಕ ಸಮನ್ವಯೀಕರಣ ಹೊಂದಿರುವ ಕುರಿತು ದೃಢೀಕರಿಸಿಕೊಂಡು 2019-20 ನೇ ಸಾಲಿನಲ್ಲಿ ಉಳಿದಿರುವ ಶಿಲ್ಕುಗಳನ್ನು ಆಯಾ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಗಳ ನಿಧಿ -1 & 3 ರ ಖಾತೆಗಳಿಗೆ ಮುಂದುವರೆಸಲು ಕ್ರಮ ಕೈಗೊಳ್ಳುವುದು.

ಈ ಪ್ರಕ್ರಿಯೆ ತಪ್ಪದೆ ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ಅನುಸರಿಸಲು ಆದೇಶಿಸಿದೆ.

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)

ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಆರ್ಥಿಕ ಇಲಾಖೆ

ರವರಿಗೆ:

1. ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು
2. ಸರ್ಕಾರದ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ, ಪ. ರಾ. ಇಲಾಖೆ, ಬಹು ಮಹಡಿಯ ಕಟ್ಟಡಗಳು, ಬೆಂಗಳೂರು
4. ಸರ್ಕಾರದ ಸಲಹೆಗಾರರು, ಆರ್ಥಿಕ ಇಲಾಖೆ, ಖಜಾನೆ-2, 7 ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು
5. ಖಜಾನೆ ಆಯುಕ್ತರು, ಖಜಾನೆ ಆಯುಕ್ತಾಲಯ, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು
6. ಆಂತ್ರಿಕ ಆರ್ಥಿಕ ಸಲಹೆಗಾರರು, ಗ್ರಾ, ಪ. ರಾ. ಇಲಾಖೆ, ಬಹು ಮಹಡಿಯ ಕಟ್ಟಡಗಳು, ಬೆಂಗಳೂರು
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
8. ಪ್ರಾಜೆಕ್ಟ್ ಡೈರೆಕ್ಟರ್, ಖಜಾನೆ-2, 7 ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು
9. ಪ್ರಾಜೆಕ್ಟ್ ಮ್ಯಾನೇಜರ್, ಖಜಾನೆ-2, ಖನಿಜ ಭವನ 7 ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು
10. ಜಂಟಿ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
11. ಹೆಚ್ಚುವರಿ ಪ್ರತಿ
12. ಸುತ್ತೋಲೆ ಕಡತಕ್ಕೆ